
ಹರಿಯಲು ಬಿಡು
(ಕವಿತೆಗಳು)
ಹಿಂದಿ ಮೂಲ:
ಅಜಯಕುಮಾರ ಸಿಂಹ
ಕನ್ನಡ ಅನುವಾದ:
ಎಚ್.ಎಸ್. ಶಿವಪ್ರಕಾಶ
ಪು: 92; ಬೆ: ರೂ. 100
ಪ್ರ: ಕವನ ಪ್ರಕಾಶನ,
ಬಳ್ಳಾರಿ.
ಫೋನ್: 9342681428




ಕವನ ಕನ್ನಡದಲ್ಲಿ 'ಸ್ರೋತ' ಎಂದು ಅನುವಾದವಾಗಿದೆ. ಹರಿಯುವಿಕೆಯ ಹಲವು ಸಾಧ್ಯತೆಗಳೂ ಇಲ್ಲಿ ರೂಪಕವಾಗಿದೆ. ಹಿಂದಿಯಲ್ಲಿ ಝುರಿ ಎಂಬರ್ಥದ ಈ ಕವನ ಹರಿಯುವಿಕೆ ಆತುರ, ಕಾತುರಗಳಿಲ್ಲದೆ ಮಾತ್ರವಲ್ಲ ನಡುಬೇಸಿಗೆಯಲ್ಲೂ ಮರ್ಮರವಿಲ್ಲದೆ ಗಿರಿಬಂಡೆಯಿಂದ ಜಿನುಗುವ ಅದರ ರೂಪವನ್ನೂ ಗುಣವನ್ನೂ ಧ್ಯಾನಿಸುತ್ತದೆ. ಅದುವೆ ಹೊಳೆ, ನದಿ, ಕಡಲು. ಹಿಂದಿಯಲ್ಲಿ 'ಸಿಂಧು' ಎಂದಿರುವ ಪದ ಕನ್ನಡದಲ್ಲಿ ಕಡಲಾಗಿದೆ. ನಡು ಬೇಸಿಗೆಯಲ್ಲಿ ಗಿರಿ ಬಂಡೆಯಿಂದ ಜಿನುಗುವಿಕೆ ಹಿಂದಿಯಲ್ಲಿ ಕವಿಗೆ 'ಕರುಣಾಸಿಂಧು'ವನ್ನು ನೆನಪು ಮಾಡಿಸಿಕೊಡುತ್ತದೆ. ಕನ್ನಡದಲ್ಲಿ ಕರುಣಾ ಸಾಗರ(ಕಡಲು). ಹೀಗೆ ಹರಿಯುವಿಕೆ, ಪ್ರೀತಿ, ಲೌಕಿಕದ ಕ್ರೌರ್ಯವನ್ನು ಮೀರಬೇಕಾಗಿರುವುದಕ್ಕೆ ಆಶ್ರಯಿಸುವ ಅಲೌಕಿಕದ ಕಾರುಣ್ಯದ ಸಹಾಯ ಇಲ್ಲಿನ ಹಲವು ಕವನಗಳಲ್ಲಿ ಪುನರಾವರ್ತನೆಯಾಗಿದೆ.

'ಪ್ರವಾಸವನದಲ್ಲಿ ಕೃಷ್ಣ' ಪೌರಾಣಿಕ ಸಂದರ್ಭದಲ್ಲೂ ಅಪರೂಪದ ಕವನ. ಗೋಕುಲ ನಿರ್ಗಮನದ ಬಳಿಕ ಕೃಷ್ಣನೊಡನೆ ರಾಧೆ ಇಲ್ಲ. ರುಕ್ಮಿಣಿ, ಸತ್ಯಭಾಮ, ಜಾಂಬವತಿ ಮೊದಲಾದ ಎಂಟು ಜನ ಮುಖ್ಯ ಮಡದಿಯರ ಪ್ರವೇಶವಾಗುತ್ತದೆ. ಅವನ ಕೈಯಲ್ಲಿದ್ದ ಕೊಳಲು ಹೋಗಿ ಪಾಂಚಜನ್ಯ ಬರುತ್ತದೆ. ತಲೆಯ ನವಿಲುಗರಿಯ ಸ್ಥಾನದಲ್ಲಿ ರಾಜರ ಕಿರೀಟ. ಆದರೆ ಈ ಕವನದಲ್ಲಿ ಕೃಷ್ಣ ಜೀವನದುದ್ದಕ್ಕೂ ಮನುಷ್ಯತ್ವದ, ಮುಗ್ಧ ಮನಸ್ಸಿನ, ಪ್ರೀತಿಯ ಒಂದು ತತ್ವವನ್ನಾಗಿ ರಾಧೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೊನೆವರೆಗೂ ಕಾಪಾಡಿಕೊಂಡಿದ್ದಾನೆ. ರಾಧೆಯೊಳಗೇ ಅವನ ಇತರ ಇಚ್ಛೆಗಳೆಲ್ಲ ಸಮಾಹಿತವಾಗಿವೆ. ರಾಧೆ ಜೊತೆ ನಿರಾಳ ಇರುವುದನ್ನು ಕೃಷ್ಣ ಬಯಸುತ್ತಾನೆ. ಆದರೆ ಅವ ಆಯುಧ ಹಿಡಿದು ಯುದ್ಧ ಮಾಡಬೇಕಾಯಿತು, ಕೊಟ್ಟ ಮಾತುಗಳನ್ನು ಮುರಿಯಬೇಕಾಯಿತು. ಇಲ್ಲವಾದಲ್ಲಿ ಜರಾಸಂಧ, ದುರ್ಯೋಧನರು ಗೆಲ್ಲುತ್ತಿರಲಿಲ್ಲವೇ ಎಂದು ಅವನೊಳಗಿರುವ ರಾಧೆಯನ್ನೇ ಪ್ರಶ್ನಿಸುತ್ತಾನೆ. ಕೃಷ್ಣ ಹಾಯುವುದು ಇಚ್ಛೆ ಮತ್ತು ಕರ್ತವ್ಯಗಳ 'ಕೊಂಡ'ವನ್ನು. ಕೊನೆಗೆ ಅವನ ಮನಸ್ಸಿನಲ್ಲಿ ರಾಧೆಯೊಡನೆ ಏಕಾಕಾರನಾದ ಕೃಷ್ಣ ಇನ್ನೊಂದು ಯಾತ್ರೆಗೆ ಸಜ್ಜಾಗಿ ಹೇಳುವುದು 'ಬಿಡು ಬಾಣ ನಿನ್ನ ಬಿಲ್ಲಿಂದ/ ನನ್ನ ಸೋದರ ವ್ಯಾಧ'. ಯಾದವರ ಕೊನೆ, ಕೃಷ್ಣನ ಕಾಲ ಬೆರಳನ್ನು ಜಿಂಕೆಯೆಂದು ತಿಳಿದು ಬಾಣ ಹೂಡಿದ ವ್ಯಾಧನಿಂದ. ಕೃಷ್ಣನ ಮನಸ್ಸಲ್ಲೂ ರಾಧೆಯ ನೆನಪಲ್ಲಿ ಹರಿಯುವ ಪ್ರೀತಿ– ಈ ಲೌಕಿಕದ– ರಾಜಧರ್ಮದ ನೆಪದ ಹಿಂಸೆಯ, ರಾಜಕೀಯದ, ಹಲವು ಕಡೆ ನೈತಿಕತೆಯ ಪ್ರಶ್ನೆಗಳನ್ನೆಬ್ಬಿಸುವ ಎಲ್ಲಾ ಕ್ರೌರ್ಯಗಳಿಂದ– ರಾಧೆಯ ಪ್ರೀತಿ, ಮುಗ್ಧತೆಗಳು ಕೃಷ್ಣನನ್ನು ಕಾಪಾಡುತ್ತವೆ. ಕ್ರಿಶ್ಚಿಯಾನಿಟಿ ಹುಟ್ಟುವ ಮಗುವಿನ ಮುಗ್ಧತೆ ದೇವರ ಸಾನ್ನಿಧ್ಯದಲ್ಲಿ ಪಡೆದ ಪಾವಿತ್ರ್ಯತೆ ಎಂದು ನಂಬುತ್ತದೆ. ರಾಧೆ ಇಲ್ಲಿ ಕೃಷ್ಣ ತನ್ನೊಳಗೆ ತಾನು ಕಾಪಾಡಿಕೊಂಡ ಮುಗ್ಧಭಾವಕ್ಕೆ ಪ್ರತೀಕ.

ಅಜಯಕುಮಾರ ಸಿಂಹ ಮೂಲತಃ ಉತ್ತರ ಪ್ರದೇಶದವರು. ಕರ್ನಾಟಕಕ್ಕೆ ಐಪಿಎಸ್ ಅಧಿಕಾರಿಯಾಗಿ ಬಂದು, ಕರ್ನಾಟಕದ ಪೊಲೀಸ್ ಮುಖ್ಯಸ್ಥರಾಗಿ (ಡಿಜಿ ಮತ್ತು ಐಜಿಪಿ) ನಿವೃತ್ತರಾಗಿ ಕರ್ನಾಟಕದಲ್ಲೇ ನೆಲೆಸಿದ್ದಾರೆ. ಅಲ್ಲಮಪ್ರಭು ಮತ್ತು ಕಬೀರರ ತೌಲನಿಕ ಅಧ್ಯಯನದ ಸಂಶೋಧನಾ